**ಹೆಂಡತಿ:** ವೆಲ್ಡಿಂಗ್ ಮತ್ತು ವೆಡ್ಡಿಂಗ್‌ನಲ್ಲಿ ಇರುವ ವ್ಯತ್ಯಾಸ ಏನು?
**ಗಂಡ:** ವೆಲ್ಡಿಂಗ್‌ನಲ್ಲಿ ಕಿಡಿ ಹಾರಿ ನಂತರ ಶಾಶ್ವತ ಜೋಡಣೆ ಆಗುತ್ತದೆ. ಆದರೆ ವೆಡ್ಡಿಂಗ್‌ನಲ್ಲಿ ಮೊದಲು ಜೋಡಣೆ ಆಗಿ ಜೀವನ ಪೂರ್ತಿ ಕಿಡಿ ಹಾರ್ತಿರುತ್ತೆ.

**ಸೀನ:** ನಿನ್ನ ನೋಡ್ತಿದ್ರೆ, ದೇವತೆಯನ್ನೇ ನೋಡ್ತಿದ್ದೀನಿ ಅಂತ ಅನಿಸುತ್ತದೆ.
**ಮೀನ:** ಹಾಗಾದ್ರೆ, ಮುಖ ನೋಡಿದ್ದು ಸಾಕು ಕಾಣಿಕೆ ಹಾಕಿ ಮುಂದೆ ಹೋಗು. ಭಕ್ತರು ಕ್ಯೂನಲ್ಲಿ ನಿಂತು ಕಾಯ್ತಿದ್ದಾರೆ.

**ಸೋಮಣ್ಣ:** ಮದುಮಗಳಿಗೆ ಏನೇನು ಹಾಕ್ತಾ ಇದ್ದೀರಿ?
**ರಾಮಣ್ಣ:** ಲಿಪ್‌ಸ್ಟಿಕ್, ಗೋರಂಟಿ, ಫೇಸ್ ಪ್ಯಾಕ್, ಕೂದಲಿಗೆ ಹೇರ್ ಡೈ ಹಾಕ್ತೀವಿ.

'ಹಕ್ಕಿಯಂತೆ ಆಗಸದಲ್ಲಿ ಹಾರಾಡುವಾಸೆ' ಅಂತ ಗಂಡ ವಾಟ್ಸ್‌ಆ್ಯಪ್‌ನಲ್ಲಿ ಮೆಸೇಜ್ ಹಾಕಿದ. ಪ್ರತಿಯಾಗಿ ಆತನ ಹೆಂಡತಿ, 'ಸರಿ ಸರಿ... ಭೂಮಿ ಮೇಲೆ ಕಾಲಿಟ್ಟಾಗ ಮರೆಯದೆ ಕರಿಬೇವಿನ ಸೊಪ್ಪು ತಗೊಂಡು ಬನ್ನಿ' ಅಂತ ಪ್ರತಿಕ್ರಿಯಿಸಿದಳು.

**ಜಡ್ಜ್:** ನೀನು ಕೇಳಿಕೊಂಡಂತೆಯೇ ಡೈವೋರ್ಸ್ ಸಿಕ್ಕಿದೆ. ಇನ್ನುಮುಂದೆ ನಿನ್ನ ಸಂಬಳದ ಅರ್ಧ ಭಾಗ ಆಕೆಗೆ ಕೊಡು.
**ರಂಗ:** ತುಂಬಾ ಸಂತೋಷ ಸ್ವಾಮಿ. ಇನ್ನು ಮುಂದೆಯಾದರೂ ಸಂಬಳದ ಅರ್ಧ ಭಾಗ ನನಗೇ ಸಿಗುತ್ತಲ್ಲಾ... ಅಷ್ಟೇ ಸಾಕು.

**ಜೈಲರ್:** ನಾಳೆ ನಿನಗೆ ಗಲ್ಲು ಶಿಕ್ಷೆ. ನಿನ್ನ ಕೊನೆಯ ಆಸೆ ಏನಾದರೂ ಇದ್ದರೆ ಹೇಳು.
**ಕೈದಿ:** ನನ್ನ ಮಕ್ಕಳನ್ನು ನೋಡಬೇಕು.
**ಜಡ್ಜ್:** ಅವರು ಎಲ್ಲಿದ್ದಾರೆ? ವಿಳಾಸ ಕೊಡು ಅವರನ್ನು ಕರೆಸುತ್ತೇವೆ.
**ಕೈದಿ:** ನನಗಿನ್ನೂ ಮದುವೇನೆ ಆಗಿಲ್ಲ ಸಾರ್, ಮೊದಲು ಅದಕ್ಕೆ ಅವಕಾಶ ಮಾಡಿಕೊಡಿ.

**ಕನಕ:** ಸೀರಿಯಲ್ ಹೆಸರು ನೋಡ್ರಿ... 'ಬೀಡಿ ಸೇದಿ ಬಂದ' ಅಂತೆ. ಛೇ... ಅಸಹ್ಯವಾಗಿ ಹೆಸರಿಟ್ಟಿದ್ದಾರೆ.
**ಕಿಟ್ಟಿ:** ಅಪ್ಪ ತಂದೆ... ಸರಿಯಾಗಿ ಕನ್ನಡ ಓದು. ಅದು 'ಬಿಡಿಸದ ಬಂಧ'.

**ಮೇಷ್ಟ್ರು:** ಹಲವು ವರ್ಷಗಳಾದವು ನಿನ್ನ ನೋಡಿ. ಈಗ ಏನ್ ಮಾಡ್ತಾ ಇದ್ದೀಯಾ?
**ವೆಂಕಿ:** ಎಂ.ಬಿ.ಎ ಮಾಡ್ಕೊಂಡಿದ್ದೀನಿ ಸರ್.
**ಮೇಷ್ಟ್ರು:** ವೆರಿ ಗುಡ್, ಎಲ್ಲಿ ಕೆಲಸ?
**ವೆಂಕಿ:** ಮೈಸೂರಲ್ಲಿ ಬೋಂಡಾ ಅಂಗಡಿ(ಎಂಬಿಎ) ನಡೆಸ್ತಾ ಇದ್ದೀನಿ.

**ರಂಗ:** ಇನ್ನು ಯಾವತ್ತೂ ಕುಡಿದ ಮತ್ತಿನಲ್ಲಿ ಎಟಿಎಂನಲ್ಲಿ ದುಡ್ಡು ತೆಗಿಬಾರದು ಅಂತ ತೀರ್ಮಾನ ಮಾಡಿಬಿಟ್ಟೆ.
**ಸಿಂಗ:** ಯಾಕೆ? ಅಂಥದ್ದು ಏನಾಯಿತು?
**ರಂಗ:** ನಿನ್ನೆ ರಾತ್ರಿ 2000 ಡ್ರಾ ಮಾಡಿದೆ. ಕುಡಿದ ಮತ್ತಲ್ಲಿ ಆ ನೋಟುಗಳನ್ನು ಹರಿದು ಹಾಕಿ ಸ್ಲಿಪ್ ಅನ್ನು ಜೇಬಿಗೆ ಇಟ್ಟು ಕೊಂಡು ಬಂದೆ.

**ಮೀನಾಕ್ಷಿ:** ನನ್ನ ಗಂಡನ ಹೇಗಿದ್ದಾರೆ?
**ಡಾಕ್ಟರ್:** ಪರ್ವಾಗಿಲ್ಲ, ನರ್ಸ್ ಬಂದ್ರೆ ಆಗಾಗ ಕಣ್ಣು ಬಿಟ್ಟು ನೋಡ್ತಾ ಇರ್ತಾರೆ.
**ಮೀನಾಕ್ಷಿ:** ಈ ಸ್ಥಿತಿಗೆ ತಂದ್ರೂ ಹಳೆ ಚಾಳಿ ಬಿಟ್ಟಿಲ್ಲ ಅಲ್ವಾ ಇವ್ರು. ಇರಿ ಮಾಡ್ತೀನಿ...






ಸಕ್ಕರೆ ಸಚಿವರ ಮಾತು ಸಕ್ಕರೆಯಂತೆ ಇರಲಿ ಅಂತ ಜನ ಬಯಸ್ತಾರೆ ಅಲ್ವೇ..?

ಮಾಜಿ ಪ್ರೇಯಸಿಯ ಮದುವೆಗೆ ಹೋದ ಪ್ರೇಮ್‌ನನ್ನು ಹುಡುಗಿಯ ತಂದೆ ಕೇಳಿದರು
**ತಂದೆ:** ತಾವು ಯಾರು ಅಂತ ಗೊತ್ತಾಗಲಿಲ್ಲ?
**ಪ್ರೇಮ್:** ನಾನು ಸೆಮಿಫೈನಲ್‌ನಲ್ಲಿ ಸೋತವನು. ಈಗ ಫೈನಲ್ ನೋಡಲು ಬಂದಿದ್ದೇನೆ.

**ಸೀನ:** ಸೆಕ್ಯುರಿಟಿ ಬೇಗ ಬನ್ನಿ, ನನ್ನ ಹೆಂಡತಿ ಕಿಟಕಿ ಇಂದ ಹಾರಿ ಸಾಯಬೇಕು ಅಂತಿದ್ದಾಳೆ.
**ಸೆಕ್ಯುರಿಟಿ:** ನಾನು ಏನು ಮಾಡೋಕೆ ಆಗುತ್ತೆ ಸರ್?
**ಸೀನ:** ಕಿಟಕಿ ಜಾಸ್ತಿ ಬಿಗಿ ಆಗಿದೆ ಬೇಗ ಬಂದು ಅದನ್ನು ಸಡಿಲಗೊಳಿಸಿ ಅವಳಿಗೆ ಸಹಕರಿಸಿ.

**ಮೇಷ್ಟ್ರು:** ಎಕ್ಸಾಂ ಹಾಲ್‌ನಲ್ಲಿ ಈ ವಿಸ್ಕಿ ಬಾಟಲ್‌ನ ಯಾಕೆ ತಂದೆ?
**ಮಂಕ:** ಈ ದಿನದ ಪರೀಕ್ಷೆಯಲ್ಲಿ ಮಿನಿಮಮ್ ನೈಂಟಿ ತಗೋಬೇಕು ಅಂತ ನೀವೇ ಹೇಳಿದ್ರಲ್ಲ ಸರ್, ಅದಕ್ಕೆ ತಂದೆ.

**ಎಲೆಕ್ಷನ್ ಆಫೀಸರ್:** ಬೂತ್ ಒಳಗೆ ನಿಂತು ಏನು ಯೋಚನೆ ಮಾಡ್ತಾ ಇದ್ದೀರಿ? ಬೇಗ ವೋಟ್ ಹಾಕಿ ಹೊರಗೆ ಬನ್ನಿ.
**ಗುಂಡ:** ಸ್ವಲ್ಪ ತಡೀರಿ ಸರ್.. ನಿನ್ನೆ ರಾತ್ರಿ ನನಗೆ ಎಣ್ಣೆ ಕೊಡಿಸಿದವರು ಯಾವ ಪಾರ್ಟಿಯವರು ಅಂತ ನೆನಪು ಮಾಡ್ಕೊತಾ ಇದೀನಿ.

(ತನ್ನ ತೋರು ಬೆರಳನ್ನು ಗಂಡನ ಕಡೆ ತೋರಿಸಿ ಕರೆದಳು. ಪಾಪ ಗಂಡ ಎದ್ದು ಹೆಂಡತಿಯ ಬಳಿ ಹೋದ)
**ವಿಶ್ವ:** ಏನೇ ವಿಶಾಲೂ ಕರೆದಿದ್ದು?
**ವಿಶಾಲು:** ನನ್ನ ಈ ತೋರು ಬೆರಳಿನ ಶಕ್ತಿ ಎಷ್ಟಿದೆ ಅಂತ ಸುಮ್ಮನೆ ಟೆಸ್ಟ್ ಮಾಡಿದೆ.

**ರತ್ನ:** ರೀ... ಈ ಸಲ ಹಬ್ಬಕ್ಕೆ ಶಾಪಿಂಗ್ ಲಿಸ್ಟ್ ಮಾಡ್ಲಾ?
**ವೆಂಕಿ:** ಸರಿ ಮಾಡು.
**ರತ್ನ:** ಮೊದಲು ಏನು ತಗೊಳ್ಳೋಣ?
**ವೆಂಕಿ:** ಸಾಲ.

ಸಂಗ್ರಹ: ಆರ್. ವೀರೇಶ್ ಕುಮಾರ್, ಬೆಂಗಳೂರು